ದನಗಳ ಹೊಲ್ತಾವ ಒಡ್ಕಂಡೋಗಿ ದೊಡ್ಡ ಹಗ್ಗದಲ್ಲಿ ಬೀಳಲ್ಲಿ ಕಟ್ಟಾಕಿ ಮೇಯ್ಸು, ನಾನು ಬರೋದು ಎಷ್ಟೊತ್ತಾಗುತ್ತೊ ಗೊತ್ತಿಲ್ಲ' ಎನ್ನುತ್ತಾ 'ಅವುನ್ನ ಇಟ್ಟಿದ್ದೀಯಾ?' ಎಂದಾಗ, ಸಾಕಮ್ಮ, 'ಹೂ ಅಂಗಿ ಜೋಬಲ್ಲಿ ಇಟ್ಟಿದ್ದೀನಿ' ಅಂದಿದ್ದನ್ನ ಕೇಳಿಸಿಕೊಂಡು ಈತ ಕೇರಿ ಹಾದಿಯ ದಾಟಿ ಊರ ಹಾದಿಗೆ ಕಾಲಾಕಿ ಬಸ್ ಸ್ಟಾಪ್‌ಗೆ ಬಂದು ಬಸ್ ಹತ್ತಿ, ನವಿಲೂರಿನ ನಾಡಕಚೇರಿ ಹತ್ತಿರ ಪ್ರತ್ಯಕ್ಷವಾಗಿ ಬಸವರಾಜಪ್ಪನನ್ನು ಕಂಡು ಆತನಿಗೆ ಕೊಡಬೇಕಾಗಿದ್ದ ಹಣಕ್ಕೆ ವಡವೆ ಒತ್ತೆ ಇಟ್ಟು ಹಣ ನೀಡುವ ವಿಚಾರವನ್ನು ಅಸಹಾಯಕತೆಯಿಂದ ವಿವರಿಸಿದ. ಬಸವರಾಜಪ್ಪ ಈತನ ದುಸ್ಥಿತಿಯ ಕಣ್ಣಾರೆ ಕಂಡು ಮನದೊಳಗೆ ಮರುಗಿ ತನಗೆ ಗೊತ್ತಿರೋ ಒಡವೆ ಅಂಗಡಿ ಹತ್ತಿರ ಕರ್ಕಂಡೋಗಿ ಈಗಾಗಲೇ ಮಾತಾಡಿದ್ದ ಹಣಕ್ಕಷ್ಟೆ ಒತ್ತೆ ಇಟ್ಟು, ಅವನೆಸರಿಗಾಗಿದ್ದ ಹೊಲದ ದಾಖಲೆಪತ್ರಗಳನ್ನು ಕೊಡಿಸಿ , ಒಂದು ಸೈಬರ್ ಸೆಂಟರ್ ನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕರೆದಿದ್ದ ಉಚಿತ ಗಂಗಾಕಲ್ಯಾಣ ಯೋಜನೆಗೆ ಅರ್ಜಿ ಕೂಡ ಸಲ್ಲಿಸಿ, ಬಸವರಾಜಪ್ಪ ಈತನನ್ನು ಊರಿಗೆ ಕಳಿಸಿದ್ದರು, ನೆಮ್ಮದಿಯಿಂದ ಊರಿಗೆ ಬಂದ ಹನುಮಪ್ಪ ತನ್ನ ದಿನನಿತ್ಯದ ಬದುಕಿನೊಳಗೆ ಸೇರಿಕೊಂಡಿದ್ದ.

ಅವತ್ತೊಂದಿನ ಕಲ್ಲಳ್ಳಿಯ ಊರು ಕೇರಿಯ ತುಂಬೆಲ್ಲ ತಮಟೆ ಸದ್ದು ಪ್ರತಿಧ್ವನಿಸುತ್ತಿತ್ತು ಕಲ್ಲಳ್ಳಿ ಬಸ್ ಸ್ಟಾಪ್‌ನಲ್ಲಿ ಕುಳಿತು ಟೀ, ಕಾಪಿ ಕುಡಿತಿದ್ದವರು ಅದೇನು ವಿಚಿತ್ರ ಜನಗಳಪ್ಪ ಬೇರೆ ಬೇರೆ ಕೆಲಸ ಕಾರ್ಯಗಳಿಗೆಲ್ಲ ಮೈಕಲ್ಲಿ ಕೂಗಿ ಸಾರಾಕ್ಕೊಂಡು ಹೋಗ್ತಾರೆ, ಈತರದ ಗ್ರಾಮದ ಮೀಟಿಂಗ್‌ಗಳಿಗೆಲ್ಲ ಕೇರಿ ಜನಗಳ ಕೈಯಲ್ಲೆ ಟಾಂ ಟಾಂ ಹೊಡುಸ್ತಾರೆ ಎಂದು ಕೆಲವು ಪ್ಯಾಂಟ್ ಶರ್ಟ್ ಹಾಕ್ಕೊಂಡು ನಗರುಕ್ಕೆ ಹೋಗಲು ಬಸ್ ಕಾಯ್ತ ಇದ್ದ ಜನಗಳ ಮಾತುಕತೆ ಮಧ್ಯ, ಟೀ ಅಂಗಡಿ ರಾಮಣ್ಣ ಅಲ್ಲೇ ಜಗಲಿ ಕಲ್ಲ ಮೇಲೆ ಕೂತಿದ್ದ ಅದೇ ಊರಿನ ಸಿದ್ದಲಿಂಗಪ್ಪಂಗೆ, 'ಯಾಕ ಸ್ವಾಮಿ ತಪಡೆ ಬಾರುಸ್ತೌರೆ ಏನ್ ಸಮಾಚಾರ ಎಂದುದ್ದಕ್ಕೆ, 'ಏ.... ಎಸ್ಸಿ ಎಸ್ಟಿ ಜನರಿಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊಳವೆಬಾವಿಗಳು ಬಂದಿದ್ದಾವಂತೆ ಅದುಕ್ಕೆ ಎಂಎಲ್ಎ ಯವರ ಪಿ.ಎ. ವಿಷಯ ಸಂಗ್ರಹ ಮಾಡೋದಕ್ಕೆ ಬರ್ತಾರಂತೆ, ಮಣೆಗಾರ ಹನುಮಂತ ಅದ್ಯಾರರನ್ನೊ ಹಿಡಿದು ಜಮೀನ್ನ ಅವನ ತಾತನ ಹೆಸರಿಂದ ಅವನ ಹೆಸರಿಗೆ ಮಾಡಿಸ್ಕೊಂಡು, ಅಪ್ಲಿಕೇಷನ್ ಹಾಕಿ ಬಂದೌನಂತೆ. ಇದೇ ಊರಲೆಲ್ಲ ಸುದ್ದಿ, ಕೇರಿ ಜನರನ್ನೆಲ್ಲ ಸೇರಿಸಿ ಅದೇನೋ ಸಭೆ ಮಾಡ್ತಾರಂತೆ' ಎಂದಾಗ ಇದನ್ನ ಕೇಳಿಸ್ಕೊಂಡ ರಾಮಣ್ಣ 'ಎಷ್ಟ್ ಗಂಟೆಗೆ ಸ್ವಾಮಿ ಮೀಟಿಂಗ್' ಅಂದಿದ್ದಕ್ಕೆ '11 ಗಂಟೆಗೆ ಅಂತ ಹೇಳೌರೆ ಅವರು ಎಷ್ಟ್ ಗಂಟೆಗೆ ಬರ್ತಾರೋ ಯಾರಿಗೊತ್ತ ರಾಮಣ್ಣ' ಅಂದ್ರು. ಅದುಕ್ಕೆ ರಾಮಣ್ಣ 'ಅಲ್ಲ ಸ್ವಾಮಿ ಇಂಥಾ ಮೀಟಿಂಗು ಪಾಟಿಂಗ್ ಅಂತ ನಮ್ಮೂರಲ್ಲಿ ಯಾವತ್ತು ನಡದೇಯಿಲ್ಲ. ಈವಾಗ್ಯಾಕಿಂಗೆ ಅಂತ'. ಅದುಕ್ಕೆ ಸಿದ್ದಲಿಂಗಪ್ಪ 'ನನಗು ಗೊತ್ತಿಲಪ್ಪ ಅದರೆ ಇದು ಇರಬಹುದೇನೋ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಎಲ್ಲ ಸೌಲಭ್ಯಗಳು ಗೊತ್ತಾಗಬೇಕು ಸೌಲತ್ತುಗಳು ಉಪಯೋಗಿಸ್ಕಳ್ಳಬೇಕು ಅಂತೇನೋ ಇರುತ್ತೆ' ಅಂದಾಗ ರಾಮಣ್ಣ, 'ಇರಲಿ ಬಿಡಿ ಸ್ವಾಮಿ' ಅಂದ ತಕ್ಷಣವೇ ಸಿದ್ದಲಿಂಗಪ್ಪ ಎದ್ದು ಕುಕಳಾಕಾಗಿದ್ದ ವಲ್ಲಿಬಟ್ಟೆನ ತಕ್ಕಂಡ್ ಕೊಡವಿಕೊಂಡು ಹೊರಟಾಗ ತಮಟೆ ಶಬ್ದವು ಅಂಗೆ ದೂರಕ್ಕೆ ಹೋಗ್ತಾ ಹೋಗ್ತಾ ಮಾಯವಾಗಿತ್ತು.

ಊರಮುಂದಿನ ಅರಳಿಕಟ್ಟೆ ಜಾಗದಲ್ಲಿ ಹತ್ತಾರ ಜನ ನಿಂತ್ಕಂಡು ಸಭೆ ಸೇರೋದು ಎಲ್ಲಿ ಎಂದು ಗುಜು ಗುಜು ಶಬ್ದ ಮಾಡ್ಕಂಡು ಮಾತಾಡ್ತಾಯಿದ್ದರು. ಕೆಲವರು ಸ್ಕೂಲ್ ತಾವ ಅಂದರೆ, ಕೆಲವರು ದೇವಸ್ಥಾನದ ಮುಂದೆ ಅಂದ್ರು. ಇನ್ನು ಕೆಲವರು ಸ್ಕೂಲ್ ಹತ್ರನೂ ಬೇಡ, ದೇವಸ್ಥಾನದ ಹತ್ರನೂ ಬೇಡ ಇದೇ ಅರಳಿಕಟ್ಟೆ ಮೇಲೆ ನಡಿಲಿ, ಸ್ಕೂಲ್ ತಾವ ಮಕ್ಕಳಿಗೆ ತೊಂದರೆ ಆಗುತ್ತೆ, ದೇವಸ್ಥಾನದ ಹತ್ರ ಒಳಗೆ ಹೋಗೋರ್ಯಾರೋ? ಹೊರಗೆ ಇರೋರ್ಯಾರೋ? ಯಾಕೆ ಅವೆಲ್ಲ ತೊಂದರೆ, ಎಂದು ತರಾವರಿ ಮಾತುಗಳ ಮಧ್ಯೆ, ಹಟ್ಟಿ ಹಿರೀಕ ನರಸಜ್ಜ 'ಏ ಇಲ್ಲೆ ಮಾಡ್ರೋ ಅಳ್ಳಿಕಟ್ಟೆ ಮ್ಯಾಲೆನೆ ತಣ್ಣಗೆ ಇಸ್ರಾಮಾಗೈತೆ' ಅಂದಿದ್ದಕ್ಕೆ, ಹಟ್ಟಿ ಯಜಮಾನ ಕದರಪ್ಪ ಕೂಡ 'ಏ ಇಲ್ಲೆ ಮಾಡ್ರಪ್ಪ ಹಿರೇರ್ ಮಾತು ತಗಿಬಾರ್ದ' ಅಂದು ಅಲ್ಲೆ ಕಸ ಹೊಡ್ದು, ಚಾಪೆಗಳನ್ನೆಲ್ಲ ಹಾಸಿದರು.

ಹಟ್ಟ್ಯಾಗೆಲ್ಲ ಮನೆಗೆ ಒಬ್ಬರಂತೆ ಎಲ್ಲರೂ ಬಂದು ಸೇರ್ಕಂಡರು, ಹನುಮಪ್ಪನು ಬಂದು ಕೂತ್ಕಂಡಿದ್ದ